ಸರ್ಕಾರವು ಕನ್ನಡ ನರ್ಸರಿ ಶಾಲಾ ಶಿಕ್ಷಕರಿಗೆ ಶೇಕಡ ೧೦೦ ವೇತನ ಅನುದಾನ ನೀಡುವ ಬಗ್ಗೆ

೫೦. ಶ್ರೀ ಪೆರಿಕಾಲ್ ಎಂ, ಮಲ್ಲಪ್ಪ (ಚಿಕ್ಕಪೇಟೆ) —ಮಾನ್ಯ ವ್ಯವಸಾಯ, ತೋಟಗಾರಿಕೆ, ಶಿಕ್ಷಣ ಮತ್ತು ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸರ್ಕಾರದಿಂದ ವೇತನದ ಬಗ್ಗೆ ಶೇಕಡ ೫೦ ಅನುದಾನ ಪಡೆಯುತ್ತಿರುವ ಕನ್ನಡ ಪೂರ್ವ ಪ್ರಾಥಮಿಕ ಶಾಲೆಗಳ ಸಂಖ್ಯೆ ?

ಆ) ವೇತನದ ಉಳಿದ ಶೇಕಡ ೫೦ ಭಾಗವನ್ನು ಆಡಳಿತ ಮಂಡಳಿಗಳು ನೀಡುತ್ತಿಲ್ಲವೆಂಬುದು ನಿಜಾಂಶವಲ್ಲವೇ ?

ಇ) ಶಾಲೆಗಳ ಆಡಳಿತ ಮಂಡಳಿಗಳು ಮಕ್ಕಳಿಂದ ವಂತಿಗೆ ವಸೂಲಿ ಮಾಡುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಸರ್ಕಾರವು ಕನ್ನಡ ನರ್ಸರಿ ಶಾಲಾ ಶಿಕ್ಷಕರಿಗೆ ಶೇಕಡ ೧೦೦ ವೇತನ ಅನುದಾನ ನೀಡಿ ವೇತನವನ್ನು ಚೆಕ್ ಮೂಲಕ ನೀಡುವುದೇ ?

ಶ್ರೀ ಕೆ. ಎಚ್. ರಂಗನಾಥ್ (ವ್ಯವಸಾಯ, ತೋಟಗಾರಿಕೆ, ಶಿಕ್ಷಣ, ಮತ್ತು ಅರಣ್ಯ ಮಂತ್ರಿಗಳು).—

ಅ) ಇಲ್ಲ.

ಆ) ಯಾವುದೇ ಅನುಮೋದಿತ ಶಿಕ್ಷಕರಿಂದ ದೂರು ಬಂದಿಲ್ಲ.

ಇ) ಬಂದಿಲ್ಲ,

ಈ) ಶೇಕಡ ೧೦೦ ಅನುದಾನ ನೀಡಲು ನಿಯಮಗಳಲ್ಲಿ ಅವಕಾಶವಿಲ್ಲ. ಈಗಾಗಲೇ ವೇತನವನ್ನು ಚೆಕ್ ಮೂಲಕ ನೀಡಲಾಗುತ್ತಿದೆ.

ಮಾಲೂರಿನಲ್ಲಿ ೧೯೮೯–೯೦ನೇ ಸಾಲಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸ್ಥಾಪನೆ

೭೩. ಶ್ರೀ ಎ. ನಾಗರಾಜು (ಮಾಲೂರು).—ಮಾನ್ಯ ವ್ಯವಸಾಯ, ತೋಟಗಾರಿಕೆ, ಶಿಕ್ಷಣ ಮತ್ತು ಅರಣ್ಯ ಮಂತ್ರಿಗಳು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಾಲೂರಿನಲ್ಲಿ ೧೯೮೯–೯೦ ನೇ ಸಾಲಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ಸ್ಥಾಪಿಸಿರುವುದು ನಿಜವೇ ?

ಆ) ಕಾಲೇಜಿಗೆ ತರಗತಿಯ ಕೊಠಡಿಗಳ ಕೊರತೆ ಇರುವುದು ಸರ್ಕಾರಕ್ಕೆ ಗೊತ್ತಿದೆಯೇ ?

ಇ) ಕಾಲೇಜಿನ ಕಟ್ಟಡವನ್ನು ನಿರ್ಮಿಸಲು ಸರ್ಕಾರದ ಮುಂದೆ ಪ್ರಸ್ತಾವನೆ ಬಂದಿದೆಯೆ ?

ಶ್ರೀ ಕೆ. ಎಚ್. ರಂಗನಾಥ್ (ವ್ಯವಸಾಯ, ತೋಟಗಾರಿಕೆ, ಶಿಕ್ಷಣ ಮತ್ತು ಅರಣ್ಯ ಮಂತ್ರಿಗಳು)

ಅ) ಹೌದು.

ಆ) ಗೊತ್ತು,

ಇ) ಇಲ್ಲ. ಕಾಲೇಜಿನ ಕಟ್ಟಡ ನಿರ್ಮಿಸಲು ನಿವೇಶವ ಇನ್ನೂ ದೊರಕಿಸಿಕೊಳ್ಳಬೇಕಾಗಿದೆ.